ಸಭಾಭವನವನ್ನು ನಿರ್ಮಿಸಿ, ಅಲ್ಲಿ ಯಾವಾಗಲೂ ಸಾಹಿತ್ಯ ಸಂಬಂಧದ ಕಾರ್ಯಕ್ರಮಗಳು ನಡೆಯುವಂತಾಗಲಿ ಎಂದು ಆಶಿಸಿ, ಅದರ ಉದ್ಘಾಟನೆಗೆ ಎನ್ನುವಂತೆ ಭೈರಪ್ಪನವರನ್ನು ಬರಹೇಳಿದ್ದರು. ಇದರೊಂದಿಗೆ 1975-80ರ ಸುಮಾರು ಚಿತ್ರದುರ್ಗದಲ್ಲಿ ಅನೇಕ ಸಾಹಿತ್ಯಾಭಿಮಾನಿಗಳು, ಸ್ಥಳೀಯ ಇತಿಹಾಸಕಾರರೆಲ್ಲ ಇದ್ದು, ಅಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಲೇ ಇದ್ದವು. ಗೋಪಾಲಕೃಷ್ಣ ಅಡಿಗರು ದುರ್ಗದ ಸರ್ಕಾರಿ ಕಲಾ ಕಾಲೇಜಿನ ಕಟ್ಟಡದ ಸನಿಹ ಒಂದು ಪುಟ್ಟ ಕೋಣೆಯಲ್ಲಿ ಕೆಲವೇ ಕೆಲವು ಸಾಹಿತ್ಯಾಸಕ್ತರ ನಡುವೆ ತಮ್ಮ ಪದ್ಯಗಳನ್ನು ತುಂಬ ಚೆಂದದಿಂದ ಓದಿದ ನೆನಪು. ಹೀಗೆ ಭೈರಪ್ಪನವರೂ ಕೂಡ ಬಂದು ಆ ಹೊತ್ತಿನ ಬೆಳಗಿನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅದಾದ ಮೇಲೂ ರಾಧಾಕೃಷ್ಣ ದಂಪತಿಗಳ ಸರ್ಕಾರಿ ಬಂಗಲೆಯಲ್ಲಿ ಒಂದೆರಡು ದಿನ ವಾಸ್ತವ್ಯ ಹೂಡಿ, ಅವರ ಆತಿಥ್ಯವನ್ನು ಸ್ವೀಕರಿಸಿ ಮೈಸೂರಿನ ಬಸ್ಸು ಹತ್ತಿದರು. ಅದೇ ಮೊದಲು ಭೈರಪ್ಪನವರನ್ನು ಕಂಡು ಒಂದೆರಡು ಗಳಿಗೆ ಮಾತನಾಡಿದ್ದ ನನಗೆ, ಆಗ ಅವರೊಂದಿಗೆ ಚರ್ಚಿಸಲು ಹೆಚ್ಚಿನ ಸಂಗತಿಗಳೇನೂ ಇದ್ದಂತಿರಲಿಲ್ಲ.

ಭೈರಪ್ಪನವರು ಚಿತ್ರದುರ್ಗಕ್ಕೆ ಬಂದಾಗ ಅವರಿಗೆ ನಲವತ್ತೈದರ ವಯೋಮಾನ. ರಾಧಾಕೃಷ್ಣ ಅವರದೂ ಅಷ್ಟೇ. ನಾನು ಅದಾಗ ತಾನೇ ಅಧ್ಯಾಪಕನಾಗಿ ಸರ್ಕಾರಿ ಕಾಲೇಜಿನಲ್ಲಿದ್ದವನು, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಳಗನ್ನಡ, ಶಾಸನ ಪಠ್ಯಗಳನ್ನು ಓದಿ, ಚಿತ್ರದುರ್ಗ ಪ್ರದೇಶದಲ್ಲಿ ಅದೇ ತಾಳೆಗರಿ ಪ್ರತಿ, ಶಾಸನಗಳೆಂದು ಹುಡುಕಿಕೊಂಡು ಓಡಾಡುತ್ತಿದ್ದೆ. ಅಂಥವೇನೂ ಸಿಗದೆ, ಅದನ್ನೆಲ್ಲ ನಮ್ಮ ಪರವಾಗಿ ಶತಮಾನದ ಹಿಂದೆಯೇ ಬಿ.ಎಲ್‌.ರೈಸ್ ಸಾಹೇಬರೇ ಮಾಡಿ ಮುಗಿಸಿದ್ದ ಪರಿಣಾಮವಾಗಿ, ನಾನು ಜನಪದ ಕಥೆ, ಹಾಡುಗಳೆಂದು ಅಂಡಲೆಯತೊಡಗಿದೆ. ಆ ಸಂಬಂಧ 'ಲೀಲಾವತಿ- ಪದ್ಮಾವತಿ' ಎಂಬ ಜನಪದ ಕಥಾ ಸಂಕಲನ ಪ್ರಕಟಿಸಿ ಅದರ ಒಂದು ಪ್ರತಿಯನ್ನು ಭೈರಪ್ಪನವರ ವಿಳಾಸಕ್ಕೆ ಕಳುಹಿಸಿದೆ. ಎರಡು ವಾರಕ್ಕೇ ಭೈರಪ್ಪನವರ ಕಡೆಯಿಂದ ಒಂದು ಕಾರ್ಡು ಬಂದಿತು. ತಮ್ಮ 'ಗೃಹಭಂಗ' ಕಾದಂಬರಿಯ ಗ್ರಾಮ್ಯ ಭಾಷೆಯನ್ನು ನೆನಪಿಸಿಕೊಂಡು, ನಿಮ್ಮ ಕಥಾ ಸಂಗ್ರಹದಲ್ಲಿ ಕಥೆಗಾರನ ಭಾಷೆ ಚೆನ್ನಾಗಿದೆ, ಆ ಬಗೆಯ ಭಾಷೆ ಸಾಹಿತ್ಯದಲ್ಲಿ ಪ್ರಯೋಗವಾಗುವುದು ಒಳ್ಳೆಯದೆಂದು ಬರೆದಿದ್ದರು. ಯಾವಾಗಲೂ ಭೈರಪ್ಪನವರು ದೀರ್ಘ ದೇಶಾಂತರ ಪ್ರಯಾಣ, ತಮ್ಮ ಕಾದಂಬರಿಗಳಿಗೆ ಬೇಕಾದ ಪುಸ್ತಕದ ಓದಿನಲ್ಲಿ ತೊಡಗಿರುತ್ತಾರೆ ಎಂದು ಕೇಳಿದ್ದ ನನಗೆ, ಯಾವುದೋ ಒಬ್ಬ ತಳಸಮುದಾಯದವನು ಹೇಳಿದ ಜನಪದ ಕಥಾ ಸಂಗ್ರಹವನ್ನು ಓದಲು ಅವರಿಗೆ ಸಮಯ ಸಿಗಲಾರದೆಂದೇ ಭಾವಿಸಿದ್ದೆ. ಅಂಥ ವೇಳೆ ಅವರ ಕಾಗದ ಸಂತಸವೆನಿಸಿತು.

ಆ ಮುಂದಿನ ದಿನಗಳಲ್ಲಿ ನನಗೆ ಹಳಗನ್ನಡ, ಛಂದಸ್ಸು, ಕಾವ್ಯಮೀಮಾಂಸೆಯನ್ನು ಬಿಟ್ಟು ಜನಪದ ಕ್ಷೇತ್ರ ಕಾರ್ಯವನ್ನು ಮುಂದುವರಿಸಬಹುದೆಂಬ ಧೈರ್ಯವುಂಟಾಯಿತು. ಆಶ್ಚರ್ಯವೆಂದರೆ, ಎಲ್ಲ ಕಾಲಕ್ಕೂ ಎಲ್ಲ ವಿಚಾರದಲ್ಲೂ ತಾರತಮ್ಯ ಇರುವಂತೆ ವಿಜ್ಞಾನ- ಇಂಗ್ಲಿಷ್-ಕನ್ನಡ ಅಧ್ಯಾಪಕರು, ವಿದ್ಯಾರ್ಥಿಗಳ ಓದಿನ ವಿಷಯ, ಶಾಲೆ-ಕಾಲೇಜು, ಅವರವರ ಹುದ್ದೆ, ಇದರಲ್ಲೆಲ್ಲ ತರತಮ ಭಾವ ಇದ್ದೇ ಇರುವಲ್ಲಿ, ಯಾರಿಗೂ ಬೇಡವಾದ ಜನಪದ ಜಗತ್ತನ್ನು ಬಯಸುವ ದೊಡ್ಡ ಲೇಖಕರೂ ಇದ್ದಾರಲ್ಲ ಎಂಬ ಹೆಮ್ಮೆಯನ್ನು ತಾಳಿದೆ. ಆ ಮುಂದಿನ ದಿನಗಳಲ್ಲಿ ಭೈರಪ್ಪನವರು ಮತ್ತೆ ಚಿತ್ರದುರ್ಗಕ್ಕೆ ಬಂದು ಅಲ್ಲಿಂದ ಚಳ್ಳಕೆರೆಯ ಯಲಗಟ್ಟೆ ಗೊಲ್ಲರಟ್ಟಿಗೆ ನಡೆದು ಸಿರಿಯಜ್ಜಿಯ ಹಾಡುಗಳನ್ನು ಕೇಳಿಸಿಕೊಂಡದ್ದುಂಟು. ಬೆಳಗೆರೆ ಕೃಷ್ಣಶಾಸ್ತ್ರಿಗಳ ಒಂದಂಕಣ ಗುಡಿಸಲಿನಲ್ಲಿ ಒಂದುವಾರ ಕಾಲ ಇದ್ದು, ಅಲ್ಲಿಯ ಬುಡಕಟ್ಟು ಹಟ್ಟಿಗಳತ್ತ ತಿರುಗಾಡುತ್ತಾ, ಶಾಸ್ತ್ರಿಗಳ ಅದೇ ಗುಡಿಸಲಿನಲ್ಲಿ ನೆಲದ ಚಾಪೆಗೆ ಕೂತು ಅಡುಗೆ ವಿಚಾರ ಮಾತನಾಡುತ್ತಿದ್ದರು. ಗುಡಿಸಲಿನಲ್ಲಿ ಕುರ್ಚಿ, ಮೇಜು, ಹಾಸಿಗೆ, ಯಾವುದೇ ಮಹತ್ವದ

